



# ಶ್ವಾನದ ಕ್ಲೋನಿಂಗ್

ಆರು ವರ್ಷದ ಪುಟ್ಟಶ್ವಾನವೊಂದು, ಇಡೀ ಪ್ರಪಂಚದಲ್ಲೇ ಅತ್ಯಂತ ಚಿಕ್ಕ ಗಾತ್ರ ಹಾಗೂ ಅತ್ಯಂತ ಹೆಚ್ಚು ಸಲ ಕ್ಲೋನಿಂಗ್ ಮಾಡಲ್ಪಟ್ಟ ಶ್ವಾನ ಎನ್ನುವ ಡಬಲ್ ವಿಶ್ವ ದಾಖಲೆಯನ್ನು ಹೊಂದಿದೆ.

ವಿಜ್ಞಾನಿಗಳು ಮಿರಾಕಲ್ ಮಿಲ್ಲಿ ಹೆಸರಿನ ಚಿಹೋವಾ ನಾಯಿಯ ಜೀನ್(ವಂಶವಾಹಿ) ಗಳಿಂದ 49 ಅನುವಂಶಿಕ ತದ್ರೂಪಗಳನ್ನು ಸೃಷ್ಟಿಸಿದ್ದಾರೆ. ಮಿರಾಕಲ್ ಮಿಲ್ಲಿಯು ಹುಟ್ಟಿದಾಗ ಎಷ್ಟು ತೂಕವಿತ್ತು ಗೊತ್ತೇ? ಕೇವಲ 28 ಗ್ರಾಂಗಳು; ಒಂದು ಚಮಚದಲ್ಲಿ ಹಿಡಿಸುವಷ್ಟು!

ಫ್ಲೋರಿಡಾದ ಕಿಸ್ಸಿಮೀದಲ್ಲಿರುವ ಈ ಶ್ವಾನದೊಡತಿ ವೆನೆಸ್ಸಾ ಸೆಮ್ಲೀರಳಿಗೂ ಇದು ಬದುಕಿ ಉಳಿಯುವುದೋ ಇಲ್ಲವೋ ಎಂಬ ಅನುಮಾನವಿತ್ತಂತೆ. ಆದರೆ ಸೆಮ್ಲೀಳರು ಪ್ರತೀ ಎರಡು ಗಂಟೆಗೊಮ್ಮೆ ಐ ಡ್ರಾಪರ್ ನಿಂದ ಹಾಲು ಕುಡಿಸುತ್ತಾ ಆರೈಕೆ ಮಾಡಿದ್ದರಿಂದ ಮಿರಾಕಲ್ ಮಿಲ್ಲಿ ಬದುಕುಳಿಯಿತಂತೆ. ಎತ್ತರ ಕೇವಲ 3.8 ಇಂಚು (9.65 ಸೆಂ.ಮೀ) ಹಾಗೂ ತೂಕ ಒಂದು ಪೌಂಡ್‌ಗಿಂತ ತುಸು ಜಾಸ್ತಿಯಿದ್ದ ಮಿರಾಕಲ್ ಮಿಲ್ಲಿಯು ಅತ್ಯಂತ ಪುಟ್ಟ ಗಾತ್ರದ ಜೀವಂತ ಶ್ವಾನ ಎಂದು 2013 ರಲ್ಲಿ ಗಿನ್ನೆಸ್ ದಾಖಲೆಯನ್ನು ಪಡೆದುಕೊಂಡಿದೆ.

ದಕ್ಷಿಣ ಕೊರಿಯಾದ ಸೋಯಮ್ ಬಯೋಟೆಕ್ ರೀಸರ್ಚ್ ಫೌಂಡೆಷನ್ ಎನ್ನುವ ವಿವಾದಾತ್ಮಕ ಸಂಸ್ಥೆಯು ಮಿರಾಕಲ್ ಮಿಲ್ಲಿಯ ಕುಬ್ಜತೆಯ ಕಾರಣವಾದ ವಂಶವಾಹಕಗಳ ರಹಸ್ಯವನ್ನು ಭೇದಿಸುವ ಕಾರಣಕ್ಕಾಗಿ ಈ ಶ್ವಾನವನ್ನು ಕ್ಲೋನಿಂಗ್ ಮಾಡಿದೆಯಂತೆ. ಮೊಟ್ಟ ಮೊದಲ ಕ್ಲೋನಿಂಗ್ ಫಲಿತಾಂಶದಿಂದ ಹುಟ್ಟಿದ ಡಾಲಿ ಕುರಿಮರಿಯ ರೀತಿಯಂತೇ ಮಿರಾಕಲ್ ಮಿಲ್ಲಿಯನ್ನು ಸಹ ಕ್ಲೋನಿಂಗ್ ಮಾಡಲಾಗಿದೆಯಂತೆ.  ಮೊದಲ ಬಾರಿಯ ಕ್ಲೋನಿಂಗ್‌ನಿಂದ ಸ ಜನಿಸಿದ 12 ನಾಯಿ ಮರಿಗಳಿಗೆ ಮೊಲ್ಲಿ, ಮಲ್ಲಿ, ಮೆಲ್ಲಿ, ಮುಮು, ಮಿಲಾ, ಮೇರಿ, ಮಿಮಿ, ಮೊನಿ, ಮಿನಿ, ಮೆಲಾ, ಮಿನಿ2 ಮತ್ತು ಮುಲನ್ ಎಂದು ಹೆಸರಿಟ್ಟಿರುವ ವೆನೆಸ್ಸಾ ಸೆಮ್ಲೀರಳು ಅವುಗಳನ್ನು ಬಲು ಮುದ್ದಿನಿಂದ ಸಾಕುತ್ತಿದ್ದಾಳೆ.

■ ವಿನಯ ಕುಮಾರ್ ಬಿ.ಹೆಚ್.

